ಶ್ರೀ ಅರಗ ಜ್ಞಾನೇಂದ್ರ:- ನಮ್ಮಲ್ಲಿ ಮರಾಠಿ ಜನಾಂಗ ಇದೆ, ಇದು ದಕ್ಷಿಣ ಕನ್ನಡದ ಆಗುಂಬೆಯಲ್ಲಿ ಬಿ.ಸಿ.ಎಂ. ಆಗುತ್ತದೆ. 9 ಕಿ.ಮೀ. ಘಾಟ್ ಇಳಿದ ತಕ್ಷಣ ಅದು ಎಸ್.ಸಿ. ಆಗುತ್ತದೆ. ಈ ರೀತಿ ಒಂದು ತಾರತಮ್ಯ ಇದೆ. ಆದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಇರತಕ್ಕ ಮರಾಠಿ ಜನಾಂಗವನ್ನು ಬದಲಾವಣೆ ಮಾಡಬೇಕು. ಏರಿಯಾ ರಿಸ್ಟ್ರಕ್ಷನ್ ಹಾಕಬಾರದು, ಈ ಜನಾಂಗ ಎಲ್ಲಿದೆ ಅಲ್ಲಿ ಎಲ್ಲಾ ಮೇಲೆತ್ತುವಂಥ ಸಮಗ್ರವಾದ ಚಿಂತನೆ ಮಾಡಿ ಕಾರ್ಯಕ್ರಮ ಹಾಕಿಕೊಳ್ಳುತ್ತೀರೋ?

ಅಧ್ಯಕ್ಷರು:- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಲ್ಲೆಲ್ಲಿ ಯಾರು ಯಾರು ಇದ್ದಾರೆ ಎಂಬುದನ್ನು ಹೇಳಿ.

ಶ್ರೀಮತಿ ಪ್ರಮೀಳ ನೇಸರ್ಗಿ:- ಏರಿಯಾ ರಿಸ್ಟ್ರಿಕ್ಷನ್ ರಿಮೂವಲ್ ಆರ್ಡರ್ ಎಂದು ಪಾರ್ಲಿಮೆಂಟ್ ಆರ್ಡರ್ ಆಗಿದೆ. ಆ ಆರ್ಡರನ್ನು ಇಂಪ್ಲಿಮೆಂಟ್ ಮಾಡಬೇಕು ಅಷ್ಟೆ. ಅಲ್ಲೇನಾದರೂ ಕಾನೂನು ತೊಡಕಿದೆಯೇ ಎಂದು ನೋಡಿ ಮಾಡಬೇಕು.

ಅಧ್ಯಕ್ಷರು:- ನೀವು ಮಾನ್ಯ ಸಚಿವರಿಗೆ ಗೈಡ್ ಮಾಡಿ.

ವಿಷಯ:- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ.

26(47)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರಿಯ ಕಛೇರಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಗಿದ್ದರೂ ಅದು ಪೂರ್ಣ ಪ್ರಮಾಣದಲ್ಲಿ ಕೆಲಸ ನಿಭಾಯಿಸುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಕೆಹೆಚ್ ಡಿಸಿಯ ಬೆಂಗಳೂರು ಹಾಗೂ ಹುಬ್ಬಳ್ಳಿ ಕಛೇರಿಯಲ್ಲಿ ನಿಗಮದ ಯಾವ ವಿಭಾಗಗಳು ಕೆಲಸ ನಿರ್ವಹಿಸುತ್ತವೆ, ಯಾವ ಯಾವ ಹುದ್ದೆಯ ಅಧಿಕಾರಿಗಳು ಇಲ್ಲಿ ಸೇವಾ ನಿರತರಾಗಿದ್ದಾರೆ;

ಇ) ಕೆಹೆಚ್ ಡಿಸಿ ಕೇಂದ್ರ ಕಛೇರಿ ಹುಬ್ಬಳ್ಳಿಯಲ್ಲಿ ನಿಗಮದ ಎಲ್ಲಾ ವಿಭಾಗಗಳು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಇರುವ ತೊಂದರೆಗಳೇನು;

ಈ) ಸದರಿ ಕಛೇರಿ ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸುವಂತೆ ಮಾಡಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರಿ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) ಹೌದು.

ಆ) ಒಬ್ಬ ಉತ್ಪಾದನಾ ವ್ಯವಸ್ಥಾಪಕರು (ಹತ್ತಿ), ಒಬ್ಬ ಮಾರುಕಟ್ಟೆ ವ್ಯವಸ್ಥಾಪಕರು ಮತ್ತು ಒಬ್ಬ ಯೋಜನೆ ಮತ್ತು ಗುಣ ನಿಯಂತ್ರಣ ಆಡಳಿತಾಧಿಕಾರಿಯವರು ತಮ್ಮ ಸಿಬ್ಬಂದಿಗಳೊಡನೆ ಈಗಾಗಲೇ ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ದಿನಾಂಕ 2-11-1996 ರಿಂದ ನಿಗಮದ ಕೇಂದ್ರ ಕಛೇರಿಯು ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ವರ್ಷದ ಮಧ್ಯದಲ್ಲಿ ವರ್ಗಾವಣೆಯಿಂದ ಸಿಬ್ಬಂದಿಯ ಸ್ಥಳಾಂತರವಾದಲ್ಲಿ ಉತ್ಪಾದನೆ, ಮಾರುಕಟ್ಟೆ, ನೇಕಾರರಿಗೆ ಉಂಟಾಗಬಹುದಾದ ಅಡಚಣೆಗಳನ್ನು ಪರಿಶೀಲಿಸಿ ಸರ್ಕಾರದ ದಿನಾಂಕ 28-10-1996ರ ಆದೇಶದ ಅನ್ವಯ ಹುಬ್ಬಳ್ಳಿಯಲ್ಲಿ ಕಾರ್ಯಾಚರಣೆ ಮಾಡಬೇಕಾದ ವಿಭಾಗಗಳನ್ನು ದಿನಾಂಕ 31-5-1997 ರೊಳಗೆ ವರ್ಗಾಯಿಸಲಾಗುವುದು.

ಈ) ಸರ್ಕಾರದ ಆದೇಶದಂತೆ ದಿನಾಂಕ 31-5-1997 ರವರೆಗೆ ಕಾಲಾವಕಾಶ ನೀಡಲಾಗಿದೆ.

ಶ್ರೀ ಡಿ.ಆರ್. ಪಾಟೀಲ್:- ತಾರೀಖು 28-10-96 ರಂದು ಸರ್ಕಾರ ಒಂದು ಆದೇಶ ಹೊರಡಿಸಿ 2-11-96 ರಿಂದ ಕೆ.ಎಚ್.ಡಿ.ಸಿ. ಕೇಂದ್ರ ಕಛೇರಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಗಬೇಕೆಂದು ಆದೇಶ ಮಾಡಿದೆ. ನನಗೆ ಕೊಟ್ಟ ಉತ್ತರದಲ್ಲಿ 2-11-96 ರಿಂದ ಕೇಂದ್ರ ಕಛೇರಿ ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಇದೆ. ಕೇಂದ್ರ ಕಛೇರಿ ಅಲ್ಲಿ ಕೆಲಸ ಮಾಡುತ್ತಿದೆ, ಆದರೆ ಎಂ.ಡಿ. ಅವರು ಮತ್ತು ಫಂಕ್ಷನಲ್ ಹೆಡ್ಸ್ ಬೆಂಗಳೂರಿನಲ್ಲೇ ಕೆಲಸ ಮಾಡುತ್ತಿದ್ದಾರೆ ಈ ರೀತಿ ಆ ಕಛೇರಿ ಕಾರ್ಯನಿರ್ವಹಿಸುತ್ತಿದೆ. ದಯವಿಟ್ಟು ಏಪ್ರಿಲ್ ಒಂದರಿಂದಲಾದರೂ ಕೇಂದ್ರ ಕಛೇರಿಯನ್ನು ಸಂಪೂರ್ಣವಾಗಿ ಹುಬ್ಬಳ್ಳಿಗೆ ಸ್ಥಳಾಂತರಿಸಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡುತ್ತೀರೋ? ಅಲ್ಲಿಯವರೆಗೆ ಎಂ.ಡಿ. ಮತ್ತು ಫಂಕ್ಷನಲ್ ಹೆಡ್ಸ್ ಏನು ಇದ್ದಾರೆ ಅವರು ವಾರದಲ್ಲಿ ಎರಡು ಮೂರು ದಿನಗಳಾದರೂ ಹುಬ್ಬಳ್ಳಿಯಲ್ಲಿ ಕುಳಿತು ಕೆಲಸ ಮಾಡುವ ಹಾಗೆ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಎಂ.ಎಸ್. ಪಾಟೀಲ್:- ಈ ಕಛೇರಿಯನ್ನು ಸ್ಥಳಾಂತರಿಸುವುದಕ್ಕೆ ನಿರ್ಣಯ ತೆಗೆದುಕೊಂಡ ಮೇಲೆ 2-11-96 ರಂದು ಅಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ನೇರವೇರಿಸಲಾಗಿದೆ. ಅವತ್ತಿನಿಂದಲೆ ಈ ಕಾರ್ಯಕ್ರಮ ಜಾರಿಗೆ ಬರಬೇಕೆಂಬ ಹಿನ್ನಲೆಯಲ್ಲಿ ಈಗಾಗಲೇ ಅಲ್ಲಿ ಬೋರ್ಡ ಮಿಟಿಂಗ್ ಮಾಡತಕ್ಕದ್ದು ಮಾಡಿದ್ದಾರೆ. ಆದೆ ಸರ್ಕಾರಿ ಆಜ್ಞೆಯಲ್ಲಿ ನಾವು ಎಲ್ಲಾ ಅಧಿಕಾರಿಗಳನ್ನು ಸ್ಥಳಾಂತರಿಸಬೇಕಾದರೆ 31-5-97 ರವರೆಗೆ ಗಡವು ಕೊಟ್ಟಿದ್ದೇವೆ. ಹಂತ ಹಂತವಾಗಿ ಮಾಡಬೇಕೆಂದು ಸಮಯ ಕೊಟ್ಟಿರುವುದರಿಂದ ಆ ಸಮಯದೊಳಗೆ ಎಲ್ಲಾ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್:- 2-11-96ಕ್ಕೆ ನೀವು ಉದ್ಘಾಟನೆ ಮಾಡಿದ ಮೇಲೆ 2-11-96ರ ನಂತರ ಒಬ್ಬ ಅಧಿಕಾರಿಯೂ ಇಲ್ಲಿಯವರೆಗೆ ಸ್ಥಳಾಂತರವಾಗಿಲ್ಲ. ತಾವು ಮೇ 31ರ ವರೆಗೆ ಎಲ್ಲಾ ಅಧಿಕಾರಿಗಳನ್ನು ಸ್ಥಳಾಂತರಿಸುವುದಕ್ಕೆ ನಾವು ಆದೇಶ ಮಾಡಿದ್ದೇವೆಂದು ಹೇಳಿದ್ದೀರಿ ಅದನ್ನೆ ಏಪ್ರಿಲ್ ಒಂದಕ್ಕೆ ಮಾಡಿ ಎಂದು ಹೇಳುತ್ತೇವೆ. ಏಪ್ರಿಲ್ 1 ಹೊಸ ಹಣ ಕಾಸಿನ ವರ್ಷ ವೀವರ್ಸ್ ಎಲ್ಲಾ ಸೇರಿ ಸಭೆ ಮಾಡಿ ಏಪ್ರಿಲ್ 1 ರೊಳಗೆ ಸ್ಥಳಾಂತರ ಆಗಲಿಲ್ಲ ಅಂದರೆ ನಾವು ಮುಷ್ಕರ

ಮಾಡುತ್ತೇವೆಂದು ಹೇಳಿದ್ದಾರೆ. ಆ ಕಹಿ ಘಟನೆಗೆ ಅವಕಾಶ ಕೊಡದ ಹಾಗೆ ಏಪ್ರಿಲ್ ಒಂದರಿಂದ ಕೇಂದ್ರ ಕಛೇರಿಯನ್ನು ಅಲ್ಲೇ ಪ್ರಾರಂಭ ಮಾಡಬೇಕು. ಅಲ್ಲಿಯವರೆಗೆ ಅಧಿಕಾರಿಗಳು ವಾರದಲ್ಲಿ ಎರಡು ದಿನವಾದರೂ ಅಲ್ಲಿಗೆ ಹೋಗಿ ಕೆಲಸ ಮಾಡಿ ಬರಬೇಕು, ಬೆಂಗಳೂರಿನಲ್ಲೇ ಇದ್ದುಕೊಂಡು ಕೆಲಸ ಮಾಡಬೇಕೆಂದು ಏನು ಇದೆ? ವೀವರ್ಸ್ ಎಲ್ಲಾ ಹೆಚ್ಚಾಗಿರುವುದು ಆ ಕಡೆ, ಆದ್ದರಿಂದ ಅವರು ಅಲ್ಲಿ ಹೋಗಿ ಕೆಲಸ ಮಾಡಬೇಕು.

ಶ್ರೀ ಎಂ.ಎಸ್. ಪಾಟೀಲ್:- ಈ ಕಛೇರಿ ಹುಬ್ಬಳ್ಳಿಯಲ್ಲಿರತಕ್ಕ ಅವಶ್ಯಕತೆಯನ್ನು ಮನಗಂಡು ಅದನ್ನು ಸ್ಥಳಾಂತರಿಸತಕ್ಕ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರಿ ಆದೇಶದಲ್ಲಿ 31-5-97ಕ್ಕೆ ಆ ಕೆಲಸವನ್ನು ಪೂರ್ಣಗೊಳಿಸತಕ್ಕ ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ಒಂದು ತಿಂಗಳು ಮೊದಲೇ ಆಗಬೇಕೆಂದು ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟಿದ್ದಾರೆ. ನಾನು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆದಷ್ಟು ಬೇಗ ಮಾಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಅಲ್ಲಿಯವರೆಗೆ ವಾರದಲ್ಲಿ ಎರಡು ದಿನ ಹುಬ್ಬಳ್ಳಿಗೆ ಬಂದು ಎಂ.ಡಿ. ಅವರು ಮತ್ತು ಫಂಕ್ಷನಲ್ ಹೆಡ್ಸ್ ಕೆಲಸ ಮಾಡಲಿ, ಉಳಿದ ನಾಲ್ಕು ದಿನ ಬೆಂಗಳೂರಿನಲ್ಲಿ ಮಾಡಲಿ.

ಅಧ್ಯಕ್ಷರು:- ತಮ್ಮ ಸಲಹೆ ಒಳ್ಳೆಯದು ಇದೆ. ಅದನ್ನು ಜಾರಿಗೆ ತರುತ್ತಾರೆ.

ವಿಷಯ:- ವಿಜಾಪುರ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ ಜಾರಿ.

27(1)

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ವಿಜಾಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರು ಜಾಸ್ತಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಲ್ಪಸಂಖ್ಯಾತರಿಗಾಗಿ ಜಾರಿಗೊಳಿಸಲಾದ ಗಂಗಾ ಕಲ್ಯಾಣ ಯೋಜನೆಯಡಿ ವಿಜಾಪುರ ಜಿಲ್ಲೆಯನ್ನು ಸೇರಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಸೇರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.